ಪುಟ್ಟ. 'ಹಾಗಾದರೆ ಪಾಪ ಆ ಚಿಟ್ಟೆಗೆ ಹೇಗೆ ಗೊತ್ತಾಗಬೇಕು ತಾನು ನಿಜವಾದ ಹೂವಿನ ಮೇಲೆ ಕುಳಿತಿಲ್ಲವೆಂದು' ಎಂದು ಹೇಳಿದರು. ಚಿಟ್ಟೆಯನ್ನು ಕಂಡು ನಕ್ಕ ತಪ್ಪು ಅರಿವಾದಂತೆ ಪುಟ್ಟ 'ಹೌದಪ್ಪ, ನಿಜ ''ಬೆಳ್ಳಗಿರೋದೆಲ್ಲ ಹಾಲಲ್ಲ'' ಎಂದು ನಮ್ಮ ಟೀಚರ್ ನಮ್ಮ ತರಗತಿಯಲ್ಲಿ ಹೇಳಿದ ಗಾದೆ ಮಾತು ಇಂದು ನೆನಪಾಯಿತು' ಎಂದನು.

ಇದರ ಮಧ್ಯೆ ಇದ್ದಕ್ಕಿದ್ದಂತೆ ಒಂದು ಆಶ್ಚರ್ಯಕರ ಘಟನೆ ನೋಡಿದ ಹಾಗೇ ಪುಟ್ಟ ಅಪ್ಪನನ್ನು ಜೋರು ದನಿಯಲ್ಲಿ ಅಪ್ಪ! ಅಪ್ಪ! ಎಂದು ಕರೆದನು. ಅವನ ಧ್ವನಿಗೆ ಗಾಬರಿ ಪಟ್ಟವರಂತೆ ಪುಟ್ಟುವಿನ ತಂದೆ 'ಏನು? ಏನು?' ಎಂದು ಪುಟ್ಟ ಬೆರಳು ತೋರಿದ ಕಡೆ ನೋಡಿದರು! ಅಪ್ಪ ಅಲ್ಲಿ ನೋಡಪ್ಪ ಆ ಚಿಟ್ಟೆ ನಮ್ಮ ಮನೆಯ ಮುಂದೆ ಬೆಳೆದಿರುವ ಹೂವಿನ ಗಿಡದಲ್ಲಿ ಬಿಟ್ಟ ಚೆಂಡುಹೂವಿನ ಮೇಲೆ ಕುಳಿತುಕೊಂಡು ಹೇಗೆ ಸಂತಸಪಡುತ್ತಿದೆ ಎಂದನು. ಆಗ ಪುಟ್ಟನ ತಂದೆ 'ನೋಡಿದಿಯಾ ಮಗನೇ, ಆ ಚಿಟ್ಟೆ ಮೊದಲು ಪ್ಲಾಸ್ಟಿಕ್ ಹೂವಿನ ಮೇಲೆ ಕುಳಿತುಕೊಂಡು ಹೂವನ್ನು ಪರೀಕ್ಷಿಸಿತು. ಅದಕ್ಕೆ ಹೂವಿನ ವಾಸನೆಯಾಗಲಿ, ಹೂವಿನ ರಸವಾಗಲಿ, ಸ್ಪರ್ಶವಾಗಲಿ ಸಿಗಲಿಲ್ಲ ಆದ್ದರಿಂದ ಅದು ಅಲ್ಲಿಂದ ಹಾರಿ ಹೋಗಿ ನಿಜವಾದ ಹೂವಿನ ಮೇಲೆ ಕುಳಿತುಕೊಂಡು ತನ್ನ ಜೀವನದ ಸಂತೋಷ ಹೇಗೆ ಕಾಣುತ್ತಿದೆ' ಎಂದರು.

'ಪುಟ್ಟು ನಮ್ಮ ಜೀವನದಲ್ಲಿ ಸಿಗುವ ಸ್ನೇಹಿತರು ಕೆಲವರು ಪ್ಲಾಸ್ಟಿಕ್ ಸ್ನೇಹಿತರು, ಕೆಲವು ನಿಜವಾದ ಸ್ನೇಹಿತರು ಇರುತ್ತಾರೆ. ಪ್ಲಾಸ್ಟಿಕ್ ಸ್ನೇಹಿತರ ಬಳಿ ಯಾವುದೇ ರೀತಿಯ ಒಳ್ಳೆಯ ನಡೆ ನುಡಿ, ಸಂಸ್ಕೃತಿ ಆಚಾರ ವಿಚಾರ ಇರುವುದಿಲ್ಲ. ಒಳ್ಳೆಯ ಸ್ನೇಹಿತರ ಸಹವಾಸ ನಮ್ಮ ಜೀವನದಲ್ಲಿ ಒಳ್ಳೆಯ ಮೌಲ್ಯಗಳು ಸಿಗುವಂತೆ ಮಾಡುತ್ತದೆ. ಸರ್ವಜ್ಞ ಹೇಳುವಂತೆ ''ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ'' ಎಂದರು. ಅಪ್ಪನ ಮಾತುಗಳನ್ನು ಕೇಳಿಸಿಕೊಂಡ ಪುಟ್ಟ 'ಅಪ್ಪ ನಾನು ಇವತ್ತು ಎರಡು ಪಾಠಗಳನ್ನು ಕಲಿತೆ ಎಂದನು. 'ಏನು? ಕಲಿತೆ ಪುಟ್ಟ' ಎಂದು ಕೇಳಿದಾಗ 'ಅಪ್ಪ ''ಬೆಳ್ಳಗಿರುವುದೆಲ್ಲ ಹಾಲಲ್ಲ'' ''ಎಲ್ಲ ಸ್ನೇಹಿತರು ನಿಜವಾದ ಸ್ನೇಹಿತರಲ್ಲ'' ಯಾರೇ ಇರಲಿ ಪರೀಕ್ಷಿಸಿ ನೋಡಿ ಸ್ನೇಹ ಮಾಡಬೇಕು, ನಮ್ಮ ಸುತ್ತಲೂ ಪ್ಲಾಸ್ಟಿಕ್ ಹೂವಿನ ಸ್ನೇಹಿತರು ನೈಜ ಹೂವಿನ ಸ್ನೇಹಿತರು ಇರುತ್ತಾರೆ' ಎಂದನು. ಪುಟ್ಟುವಿನ ಅಪ್ಪ ಸಂತೋಷದಿಂದ 'ಬೇಷ್ ಮಗನೆ' ನಿನ್ನ ಮಾತುಗಳು ಸತ್ಯ ಎಂದು, ತಮ್ಮ ಮಗನ ಮಾತುಗಳಿಗೆ ಅವನ ಬೆನ್ನು ತಟ್ಟಿದರು.

ಇವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ ಮಹಾತ್ಮ ಗಾಂಧಿಯವರ ಭಾವ ಚಿತ್ರಕ್ಕೆ ಜೀವ ಬಂದತೆ ಭಾಸವಾಗಿ ಮಂದಹಾಸ ಬೀರಿದ ಅವರ ದೃಷ್ಟಿ ಇವರ ಮೇಲೆ ಬಿದ್ದ ಹಾಗೇ ತೋರುತ್ತಿತ್ತು. ■



# ಹೊಸತನದ ಹೂವಿಗೆ

■ ವನರಾಗ ಶರ್ಮಾ

ಮೊಗ್ಗಾಗಿ ಮೆಲ್ಲನೆ ನಾಚಿಕೆಯ ಮಡಿಲಿಂದ
ಹೊಸತನದ ಹೂವೆ, ನಸುನಗುತ ಬಾ.
ದೇವತೆಯ ಪಾದಕ್ಕೆ ಜಡೆ ಮುಡಿಯ ಚಲುವಿಕೆಗೆ
ಸಿಂಗಾರ ನೀನಾಗಿ ಪರಿಮಳವ ಸೂಸುತಾ.
ಗಿಡದಲ್ಲು ನೀ ಚಂದ ಗುಡಿಯಲ್ಲು ನೀ ಚಂದ
ಮನೆ ತೋಟ ಹೂಬನದಿ ಎಲ್ಲೆಲ್ಲು ಚಂದ.
ಬಹುವಿಧದ ಬಣ್ಣಗಳು ಮನಸೆಳೆವ ರೂಪಗಳು
ಆನಂದ ದಾನಿ ನೀ ಹೆಚ್ಚಿಸಿದೆ ಅಂದ.

ಚಿಟ್ಟೆಗಳು ದುಂಬಿಗಳು ಹಕ್ಕಿಗಳು ಜೇನುಮಣಿ
ಮಕರಂದ ಸವಿಯುತ್ತ ಹಾಡುವವು ಮಧುರ.
ಉಲ್ಲಾಸ ನವಲಾಸ್ಯ ಮೋಹಕದ ಹೊಸನಾಟ್ಯ
ದಂತಿಹುದು ತೂಗುತಿಹ ಹೂ ನಿನ್ನ ಹಾರ.

ನಿತ್ಯವೂ ಹೊಸತನದ ಸುಮವರಳಿದಾಗಲೇ
ಬದುಕಿನಲಿ ಚೈತನ್ಯ ತುಂಬುವುದು ಸರಸ.
ಮುನಿಸೆಂಬ ಮೋಡ ತಾ ಮಾಯವಾಗುವುದು
ಪ್ರೀತಿದಯೆ ಮೂಡುವುದು ಕಳೆದೆಲ್ಲ ವಿರಸ.
ಕನಸುಗಳ ಕೌದಿಯನು ಮುತ್ತುಗಳ ಹೂ ಹಚ್ಚಿ
ನೇಯುವುದು ನಿನ್ನಯ ಕಾಯಕವು ಹೂವೆ.
ಮುರುಟದಿರು ಬಾಡದಿರು ಬೆಳದಿಂಗಳಾ ಚಲುವೆ
ಬಾಲೆಯೊಲು ಬಾ ನೀನು ಆಗಿರುವೆ ಒಲವೆ.
ಒಂದು ದಿನ ಬಾಳಿದರು ತ್ಯಾಗಮಯಿ ನೀ ಜಗದ
ಉತ್ಸಾಹವಾಗಿರುವೆ ನೀನಿರದೆ ಇಹುದೆ?
ಮದುವೆ ಮನೆ ಸಭೆ ಮೇಳ ನುಡಿ ಪೂಜೆ ಎಲ್ಲಕಡೆ
ನಿನ್ನದೇ ಪರಿಮಳವು ಸಿರಿ ನಗೆಯ ಮುಗುದೆ. ■